ಶ್ರೀ ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಸರ್ಕಾರದ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಹೊಸ ನ್ಯಾಯಾಲಯಗಳ ಸ್ಥಾಪನೆಯ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮೆಸ್ಕಾಂನಲ್ಲಿ ಹೊಸ ಗ್ರಾಮ ವಿದ್ಯುತ್ ಸೇವಕರ ನೇಮಕಾತಿ

249 (119) ಶ್ರೀ ವಸಂತಬಂಗೇರ. ಕೆ. (ಬೆಳ್ತಂಗಡಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೆಸ್ಕಾಂನಲ್ಲಿ ಯಾವ ಜಿಲ್ಲೆಗಳಲ್ಲಿ ಎಷ್ಟು ಜನರನ್ನು ಗ್ರಾಮ ವಿದ್ಯುತ್ ಸೇವಕ ಹುದ್ದೆಗೆ ನೇಮಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಸಿಬ್ಬಂದಿಗಳನ್ನು ಯಾವ ಆಧಾರದಲ್ಲಿ ನೇಮಿಸಲಾಗಿದೆ;

ಇ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಗ್ರಾಮ ವಿದ್ಯುತ್ ಸೇವಕ ಹುದ್ದೆಗೆ ಸಿಬ್ಬಂದಿಗಳ ನೇಮಕದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಗ್ರಾಮ ವಿದ್ಯುತ್ ಸೇವಕ ಹುದ್ದೆಗಳು ಇರುವುದಿಲ್ಲ. ಆದರೆ ಈ ಹಿಂದೆ ಗ್ರಾಮ ವಿದ್ಯುತ್ ಪ್ರತಿನಿಧಿಗಳನ್ನು ನಿಯುಕ್ತಿಗೊಳಿಸಲಾಗಿದ್ದು, ಪ್ರಸ್ತುತ ಗ್ರಾಮ ವಿದ್ಯುತ್ ಪ್ರತಿನಿಧಿಗಳನ್ನು ಮೈಕ್ರೋಫೀಡರ್ ಪ್ರಾಂಚೈಸಿಗಳನ್ನಾಗಿ ನಿಯುಕ್ತಿಗೊಳಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ;

ಕ್ರ ಸಂ.	ಜಿಲ್ಲೆ	ತಾಲ್ಲೂಕು	ಮೈಕ್ರೋ ಫೀಡರ್ ಪ್ರಾಂಚೈಸಿಗಳ ಸಂಖ್ಯೆ
1	ಶಿವಮೊಗ್ಗ	ಭದ್ರಾವತಿ	32
2		ಶಿಕಾರಿಪುರ	28
3		ಸೊರಬ	31
4	ಚಿಕ್ಕಮಗಳೂರು	ಚಿಕ್ಕಮಗಳೂರು	2
5		ಕಡೂರು	44
6		ತರೀಕೆರೆ	34
ಒಟ್ಟು			**171**

ಆ) ಮೈಕ್ರೋ ಫೀಡರ್ ಪ್ರಾಂಚೈಸಿಗಳು ಸಂಬಂಧಿತ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಾಸಿಸುವವರಾಗಿದ್ದು, ಕನಿಷ್ಠ ವಯೋಮಿತಿ 18 ವರ್ಷ ಮತ್ತು ಎಸ್.ಎಸ್.ಎಲ್.ಸಿ/ ಪಿ.ಯು.ಸಿ ಹಾಗೂ ಐ.ಟಿ.ಸಿ/ಐ.ಟಿ.ಐ. ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಆದ್ಯತೆ ನೀಡಿ ಕಳೆದ ಒಂದು ವರ್ಷದ ಕಂದಾಯ ವಸೂಲಿಯ ಸರಾಸರಿ ಆಧಾರದ ಮೇಲೆ ಒಂದು ತಿಂಗಳ ಮೊತ್ತವನ್ನು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಪ್ರಾಂಚೈಸಿಯವರಿಂದ ಠೇವಣಿ ಪಡೆದುಕೊಂಡು ನಿಯುಕ್ತಿಗೊಳಿಸಲಾಗಿದೆ.

ಇ) ಈ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ದೇವನಹಳ್ಳಿಯ ತೂಬಗೆರೆಯಲ್ಲಿ ಉಪ ಪೊಲೀಸ್ ಠಾಣೆ ಪ್ರಾರಂಭ

250 (314) ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿರುವ ತೂಬಗೆರೆ ಹೋಬಳಿಗೆ ಉಪ ಪೊಲೀಸ್ ಠಾಣೆಯನ್ನು ಪ್ರಾರಂಭ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು?